**ಓ ಎಸ್ ನಂಃ 138-17**
**ಪಿ ಡಬ್ಲ್ಯೂ ಃ 2**

**ದಿಃ 05-01-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಡಿ ಜಿ ವಕೀಲರಿಂದ**

ನಾನು ಈ ದಾವೆಯನ್ನು ಷಣ್ಮುಖಪ್ಪ ಎಂಬ ಹಿರಿಯ ವಕೀಲರ ಮುಖಾಂತರಸ ಸಲ್ಲಿಸಿರುತ್ತೇನೆ. ಈ ದಾವೆಯ ಬಗ್ಗೆ ವಕೀಲರಿಗೆ ನಾನು ಮತ್ತು ನನ್ನ ತಂದೆ ನೀಡಿರುತ್ತೇವೆ. ಈ ದಾವೆಯಲ್ಲಿ ನನ್ನ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಸರ್ವೆ ನಂ 62 ಮೂಲತಃ ನನ್ನ ಮುತ್ತಾತನಿಗೆ ಸೇರಿರುತ್ತದೆ. ಮುತ್ತಾತರವರ ಹೆಸರನ್ನು ನೋಡಿ ಹೇಳಬಹುದು. ನಾನು ಈ ದಾವೆಯಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ. ನನ್ನ ತಂದೆಗೆ ಮೂರು ಜನ ಸಹೋದರರು ಮತ್ತು ಮೂರು ಜನ ಸಹೋದರಿಯರು ಇರುತ್ತಾರೆ. ನನ್ನ ತಂದೆಯ ಅಣ್ಣನ ಹೆಸರು ಪುಟ್ಟತಿಮ್ಮರಾಯ ಆಗಿರುತ್ತದೆ. ಪುಟ್ಟತಿಮ್ಮರಾಯರವರು ತೀರಿಕೊಂಡು 10 ವರ್ಷವಾಗಿದ್ದು ಅದರ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಪುಟ್ಟತಿಮ್ಮರಾಯರವರ ಹೆಂಡತಿಯ ಹೆಸರು ಸರೋಜಮ್ಮ ಆಗಿರುತ್ತದೆ. ಸರೋಜಮ್ಮ ಈಗ ಜೀವಂತವಿರುತ್ತಾರೆ. ನನ್ನ ತಂದೆಯ ಸಹೋದರರ ಹೆಸರು ಕೆ ಟಿ ರಾಧಾಕೃಷ್ಣ, ಕೆ ಟಿ ವಿಶ್ವನಾಥ್, ವೆಂಕಟಲಕ್ಷ್ಮಮ್ಮ, ಅನ್ನಪೂರ್ಣ, ಸರೋಜಮ್ಮ ಮತ್ತು ಪುಟ್ಟತಿಮ್ಮರಾಯ ಆಗಿರುತ್ತಾರೆ. ಪುಟ್ಟತಿಮ್ಮರಾಯ ಮತ್ತು ಸರೋಜಮ್ಮರವರಿಗೆ ಮಕ್ಕಳು ಇರಲಿಲ್ಲ ಎಂದರೆ ನಿಜ. ನನ್ನ ಅಜ್ಜ ಕೂಡ್ಲು ತಿಮ್ಮರಾಯಪ್ಪರವರು ಮೈಸೂರು ಮಹಾರಾಜರ ಎಂ ಆರ್ ಎ ಯಲ್ಲಿ ಸದಸ್ಯರಾಗಿದ್ದರು ಎಂದರೆ ನಿಜ. ನನ್ನ ತಾತನ ಹೆಸರಿಗೆ ಅಂದಾಜು 600 ಎಕರೆ ಜಮೀನು ಇತ್ತು.
**ಮುಂದುವರೆದ ಪಾಟೀ ಸವಾಲುಃ ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಞ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**